OS : 47/2015
D.W-3

<u>ಹಿರಿಯ ಶ್ರೇಣಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ಕೂಡ್ಲಿಗಿ</u>

ದಿನಾಂಕಃ 03.08.2023 ರಂದು ಸಾಕ್ಷಿದಾರರಿಗೆ, ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ**

ನಿಪಿ 37 ರಲ್ಲಿರುವ ಆಸ್ತಿ ನಮ್ಮ ತಾತನಿಂದ 2 ನೇ ಪ್ರತಿವಾದಿಯ ಗಂಡನಿಗೆ ಬಂದಿರುತ್ತದೆ. ಯಾವ ಆಧಾರದ ದಾಖಲೆಯ ಮೇಲೆ ಸದರಿ ಆಸ್ತಿ 2 ನೇ ಪ್ರತಿವಾದಿಯ ಗಂಡನಿಗೆ ಹೋಗಿದೆ ಗೊತ್ತಿಲ್ಲ. ನಿಪಿ 36 ರಲ್ಲಿರುವ ಆಸ್ತಿ ನನ್ನ ತಂದೆಯ ಹೆಸರಿನಲ್ಲಿ ಇದೆ. ನಿಪಿ 37, 38 ಮೂಲತಃ ನಮ್ಮ ಒಟ್ಟು ಕುಟುಂಬದ ಆಸ್ತಿ ನನ್ನ ತಾತನ ಹೆಸರಿನಲ್ಲಿ ಅವುಗಳು ಇದ್ದವು . ಯಾವ ಆಧಾರದ ಮೇಲೆ ನಿಪಿ 37,38 ನ್ನು ಬರೆಯಲಾಗಿದೆ ಎಂದು ಗೊತ್ತಿಲ್ಲ. ನಿಪಿ 32,33,34,35 ರಲ್ಲಿರುವ ಆಸ್ತಿ ವಾದಿಗೆ ಸೇರಿದ್ದು ಎಂದರೆ ಸಾಕ್ಷಿ ಅದು ಒಟ್ಟು ಕುಟುಂಬದ ಆಸ್ತಿ ಎನ್ನುತ್ತಾರೆ. ನಿಪಿ 31 ರಲ್ಲಿರ ಆಸ್ತಿ ಯಾವ ರೀತಿ ಬಂದಿದೆ ಎಂದು ಗೊತ್ತಿಲ್ಲ ಸಾಕ್ಷಿ ಅದು ಒಟ್ಟು ಕಟುಂಬದ ಆಸ್ತಿ ಎನ್ನುತ್ತಾರೆ. ನಿಪಿ 30 ರಲ್ಲಿರುವ ಆಸ್ತಿ ನನ್ನ ತಂದೆಯ ಸ್ವಯರ್ಜಿತ ಆಸ್ತಿ . ಅದಕ್ಕೆ ಕ್ರಯ ಪತ್ರ ಸಲ್ಲಿಸಿದ್ದೇನೆ. ಆಸ್ತಿಯ ಹಸ್ತಾಂತರ ವಿವರಗಳ ದಾಖಲೆಗಳ ಮಾಹಿತಿ ಇದೆ. 1996 ರಲ್ಲಿ ವೀರಣ್ಣ ಎನ್ನುವವರಿಂದ ನನ್ನ ತಂದೆ ನಿಪಿ 30 ರಲ್ಲಿರುವ ಆಸ್ತಿಯನ್ನು ಕ್ರಮಾ ಮಾಡಿಕೊಂಡಿದ್ದಾರೆ ಅದರ ಬೆಲೆ ಗೊತ್ತಿಲ್ಲ. ನಿಪಿ 28, 29 ರಲ್ಲಿರುವ ಆಸ್ತಿಯನ್ನು ನನ್ನ ತಂದೆ ಕ್ರಯ ಮಾಡಿಕೊಂಡಿದ್ದಾರೆ. 1986 ರಲ್ಲಿ ಸಕ್ರಪ್ಪ ಇವರಿಂದ ಕ್ರಯ ಮಾಡಿಕೊಂಡಿದ್ದಾರೆ. ಆ ಸಮಯದಲ್ಲಿ ಪ್ರತ್ಯೇಕ ವಾಸವಿದ್ದರು ಸಹ ಒಟ್ಟು ಕಟುಂಬದ ಆಸ್ತಿಗಳು ಜಂಟಿಯಲ್ಲಿ ಇದ್ದವು ಎನ್ನುತ್ತಾರೆ . ನಿಪಿ 27 ರಲ್ಲಿರುವ ಆಸ್ತಿ ವಾದಿಯ ತಂದೆಗೆ ಹೇಗೆ ಬಂದಿದೆ ಎಂದು ಗೊತ್ತಿಲ್ಲ ಸಾಕ್ಷಿ ಅದು ಒಟ್ಟು ಕಟುಂಬದ ಆಸ್ತಿ ಎನ್ನುತ್ತಾರೆ.

ಮುಂದುವರೆದ ಪಾಟೀ ಸವಾಲಿಗೆ ಕೋರಿಕೆಯ ಮೇಲೆ ಮುಂದೂಡಲಾಯಿತು.
(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ).

ಓ,ಹೇ,ಕೇ,ಸರಿ ಇದೆ,

ಹಿ.ಸಿ.ಜೆ ಮತ್ತು ಜೆ.ಎಂ.ಎಫ್.ಸಿ
ಕೂಡ್ಲಿಗಿ.